ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ, ದಿನಾಂಕ:06-09-2018ರ ನಡವಳಿಗಳು

ವಿಷಯದ ಸಂಖ್ಯೆ: ವಾಕಾಸ್ಥಾನ/104/2018-19

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ದಾಸರಹಳ್ಳಿ ವಲಯಕ್ಕೆ ಸೇರಿರುವ ವಾರ್ಡ್-13 ವ್ಯಾಪ್ತಿಯಲ್ಲಿ 2017-18ನೇ ಸಾಲಿನ ಆಯವ್ಯಯದ ವಿವಿಧ ಲೆಕ್ಕ ಶೀರ್ಷಿಕೆ (14th finance grants)ಅಡಿ ಅನುದಾನದಲ್ಲಿ ಪ್ರಸ್ತಾಪಿತ ಕಾಮಗಾರಿಗೆ ಜಾಬ್ ಕೋಡ್ ಪಡೆದಿದ್ದು ಅದರ ವಿವರಗಳು ಈ ಕೆಳಕಂಡಂತೆ ಇರುತ್ತದೆ.

ಕ್ರ.ಸ	ಕಾಮಗಾರಿ ಹೆಸರು	ಜಾಬ್ ಸಂಖ್ಯೆ	ಅಂದಾಜು ಮೊತ್ತ ರೂ ಲಕ್ಷಗಳಲ್ಲಿ
1	Providing LED lights at Mallasandra ward No.13	013-18-000080	10.00
2	Providing drinking water facilities in ward No.13 in shettyhalli sub division	013-18-000081	30.00
3	Developments UGD works in Mallasandra in ward No.13 in shettyhalli sub division	013-18-000082	30.00
4	Improvements of UGD lines in Mallasandra in ward No.13 in shettyhalli sub division	013-18-000083	50.00
5	Improvements to roads and footpath in Mallasandra in ward No.13 in shettyhalli sub division	013-18-000084	15.00
6	Providing cc camera at mallasandra BHEL mini colony, vijayalakshimi layout, Ravindra nagara and other area block spots in Mallasandra in ward No.13 in shettyhalli sub division	013-18-000085	30.00
7	Providing cc camera at Santhosh nagara, prashanth nagara, kalyana nagara pipeline and other area block spots in in ward No.13 in shettyhalli sub division	013-18-000086	25.00
8	Providing Basic Amenities procuremenet of Dustbins and SWM works in ward No.13 Mallasandra	013-18-000060	50.00

ಘನ ಸರ್ಕಾರವು ತನ್ನ ಆದೇಶ ಸಂಖ್ಯೆ:ನಅಇ/23/ಎಂ.ಎನ್.ವೈ./2018, ದಿ:15/06/2018 ರ ಸರ್ಕಾರದ ಆದೇಶದಲ್ಲಿ 2017-18 ನೇ ಸಾಲಿನ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಯವ್ಯಯಕ್ಕೆ ಅನುಮೋದನೆ ನೀಡಿದಂತೆ ಆಯವ್ಯಯದಲ್ಲಿ 14ನೇ ಹಣಕಾಸು ಆಯೋಗದ ಸಾಮಾನ್ಯ ಮೂಲ ಅನುದಾನದಡಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ರೂ:265.03 ಲಕ್ಷಗಳ ವೆಚ್ಚದಲ್ಲಿ ಕೈಗೊಳ್ಳುವ ಕಾಮಗಾರಿಗಳಿಗೆ ಅನುಮೋದನೆ ನೀಡಿದ್ದು, ಅನುಮೋದಿತ ಅನುಬಂಧದಲ್ಲಿ ಲೆಕ್ಕ ಶೀರ್ಷಿಕೆ ಪಿ-3296 ಅಡಿಯಲ್ಲಿ ಸದರಿ ವಾರ್ಡ್‌ಗೆ ರೂ:15.00 ಲಕ್ಷಗಳ ಅನುದಾನವನ್ನು ನಿಗದಿಪಡಿಸಿ ಕ್ರಿಯಾ ಯೋಜನೆಗೆ ಮತ್ತು ಕಾಮಗಾರಿಯನ್ನು ಮೆ:ಕೆ.ಆರ್.ಐ.ಡಿ.ಎಲ್. ಸಂಸ್ಥೆ ಮೂಲಕ ಕೈಗೊಳ್ಳಲು ಅನುಮೋದನೆ ನೀಡಲಾಗಿರುತ್ತದೆ. ಸದರಿ ಆದೇಶದಂತೆ ಮೇಲ್ಕಾಣಿಸಿದ ಕಾಮಗಾರಿಯನ್ನು ಮೆ:ಕೆ.ಆರ್.ಐ.ಡಿ.ಎಲ್. ಸಂಸ್ಥೆ ಮುಖೇನ ಕೈಗೊಳ್ಳಲು ಪಾಲಿಕೆ ಸದಸ್ಯರಾದ ಶ್ರೀ.ಲೋಕೇಶ್.ಎನ್. ರವರು ಹಾಗೂ ಮುಖ್ಯ ಅಭಿಯತಂತರರು(ದಾಸರಹಳ್ಳಿ) ರವರು ಮೆ:ಕೆ.ಆರ್.ಐ.ಡಿ.ಎಲ್. ಸಂಸ್ಥೆ ಮುಖೇನ ಕೈಗೊಳ್ಳಲು ಪ್ರಸ್ತಾವನೆಗೆ ಶಿಫಾರಸ್ಸು ಮಾಡಿದ್ದು, ಮಾನ್ಯ ಆಯುಕ್ತರು ಒಪ್ಪಿಗೆ ನೀಡಿರುತ್ತಾರೆ.

ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯ (ಸಂಗ್ರಹಣೆ ಕೋಶ) ಆದೇಶ ಸಂಖ್ಯೆ:ಆಇ/344/ವೆಚ್ಚ-12/2018, ದಿನಾಂಕ:06-04-2018 ರಲ್ಲಿ ಸರ್ಕಾರದ ಇಲಾಖೆಗಳು ಮತ್ತು ಇತರೆ ಸಂಗ್ರಹಣಾ ಸಂಸ್ಥೆಗಳು ಕರ್ನಾಟಕ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್ (ಕೆಆರ್‌ಐಡಿಎಲ್- ಹಿಂದಿನ ಕೆ.ಎಲ್.ಎ.ಸಿ) ಸಂಸ್ಥೆಯ ಮೂಲಕ ಗರಿಷ್ಟ ರೂ.2.00 ಕೋಟಿಗಳ

Scanned with CamScanner

ಮಿತಿಯಲ್ಲಿ ಕೈಗೊಳ್ಳಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ರ ಕಲಂ 4(ಜಿ) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ 2018-19ನೇ ಸಾಲಿಗೆ ಪಾರದರ್ಶಕತೆ ಕಾಯ್ದೆಯಿಂದ ವಿನಾಯಿತಿ ನೀಡಿದೆ. ಈ ವಿಚಾರದಲ್ಲಿ ಮಾನ್ಯ ಆಯುಕ್ತರು ಕಛೇರಿ ಟಿಪ್ಪಣಿ ಸಂಖ್ಯೆ:1075/2018-19, ದಿನಾಂಕ:11-07-2018ರಂತೆ ಪಾಲಿಕೆಯ ವತಿಯಿಂದ 2018-19ನೇ ಸಾಲಿನ ಪಾಲಿಕೆಯ ಆಯವ್ಯಯದಲ್ಲಿ ನಿಗದಿಪಡಿಸಿದ ಅನುದಾನದ ಕಾಮಗಾರಿಗಳನ್ನು ಸಂಬಂಧಪಟ್ಟ ಸ್ಥಾಯಿ ಸಮಿತಿ ಅನುಮೋದನೆ ಪಡೆದು ತದನಂತರ ಸರ್ಕಾರದ ಆರ್ಥಿಕ ಇಲಾಖೆಯವರು ನೀಡಿರುವ ಷರತ್ತುಗಳಿಗೆ ನಿಯಮಾನುಸಾರವಾಗಿ ಕ್ರಮವಹಿಸಿ ಮೆ:ಕೆ.ಆರ್.ಐ.ಡಿ.ಎಲ್. ಮುಖಾಂತರ ಅನುಷ್ಠಾನಗೊಳಿಸಲು ಸೂಚಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಮಾನ್ಯ ಆಯುಕ್ತರವರ ಆದೇಶದಂತೆ, ವಾರ್ಡ್-13ರಲ್ಲಿ ಪ್ರಸ್ತಾಪಿತ 08 ಕಾಮಗಾರಿಗಳಿಗೆ ಮುಖ್ಯ ಅಭಿಯಂತರರು (ದಾಸರಹಳ್ಳಿ) ರವರ ಕೋರಿಕೆಯಂತೆ ಸರ್ಕಾರದ ಆದೇಶದಲ್ಲಿ ಸೂಚಿಸಿರುವಂತೆ ಷರತ್ತುಗಳನ್ನು ಪಾಲಿಸಲು ಸೂಚಿಸುತ್ತಾ, ಸದರಿ ಕಾಮಗಾರಿಯ ಅಂದಾಜು ಮೊತ್ತವಾದ ರೂ:240.00 ಲಕ್ಷಗಳ ಕಾಮಗಾರಿಯನ್ನು ಅನುಷ್ಠಾಗೊಳಿಸಲು ಮೆ:ಕೆ.ಆರ್.ಐ.ಡಿ.ಎಲ್. ಸಂಸ್ಥೆಗೆ ವಹಿಸಿಕೊಡುವ ಬಗ್ಗೆ ಸೂಕ್ತ ನಿರ್ಣಯ ಕೈಗೊಳ್ಳಲು ಕೋರಿ ಸಮಿತಿಯ ಮುಂದೆ ಮಂಡಿಸಲು ಮಾನ್ಯ ಆಯುಕ್ತರು ಸಂಖ್ಯೆ:ಪಿ.ಎಸ್.ಆರ್.(ಜಿ)1548/2018-19, ದಿನಾಂಕ:26-07-2018 ರಂತೆ ಅನುಮೋದಿಸಿರುವ ಮೇರೆಗೆ ವಿಶೇಷ ಆಯುಕ್ತರು(ಯೋಜನೆ) ರವರ ಕಚೇರಿ ಸಂಖ್ಯೆ:2072/2018-19 ದಿನಾಂಕ:21-08-2018ರಂತೆ ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:21-08-2018ರ ಟಿಪ್ಪಣಿ.

ಸೂಚನೆ: ವಿಶೇಷ ಆಯುಕ್ತರು(ಯೋಜನೆ) ರವರ ಟಿಪ್ಪಣಿಯಲ್ಲಿ ಸೂಚಿಸಿರುವ ಷರತ್ತುಗಳಿಗೆ ಅನುಗುಣವಾಗಿ ಕಾಮಗಾರಿಯನ್ನು ಕೈಗೊಳ್ಳಲು ಕಾರ್ಯಾದೇಶ ನೀಡಲಾಗಿದೆ. ಸದರಿ ಕಾಮಗಾರಿಯನ್ನು ಕೈಗೊಳ್ಳಲು ಅಗತ್ಯವಿರುವ ಹಣವನ್ನು ಪಾಲಿಕೆಯ ವತಿಯಿಂದ ಕೈಗೊಳ್ಳಲು ಸಾರ್ವಜನಿಕರಿಂದ ಯಾವುದೇ ಹಣವನ್ನು ಪಡೆಯುವಂತಿಲ್ಲ ಎಂದು ತಿಳಿಸಲಾಗಿದೆ.

ಅಧ್ಯಕ್ಷರ ನಿರ್ಣಯದ ಪರವಾಗಿ ಸಹಿ

ಕ್ರ ಸಂ	ಶ್ರೀಯುತರ ಹೆಸರು	ಪದನಾಮ	ಸಹಿ
1	ಇಮ್ರಾನ್ ಪಾಷ	ಅಧ್ಯಕ್ಷರು	
2	ಎಸ್.ಪಿ.ಹೇಮಲತಾ	ಸದಸ್ಯರು	S.P Hemalatha
3	ದೀಪ ನಾಗೇಶ್	ಸದಸ್ಯರು	Deepa Nagesh
4	ಶ್ವೇತ ವಿಜಯಕುಮಾರ್	ಸದಸ್ಯರು	Shwetha.
5	ಹೇಮಲತಾ ಸತೀಶ್. ಶೇಟ್	ಸದಸ್ಯರು	Hshet
6	ಯಶೋಧ ಲಕ್ಷ್ಮೀಕಾಂತ	ಸದಸ್ಯರು	Yashodha.L
7	ನೇತ್ರಾ ಪಲ್ಲವಿ.ಎಂ.	ಸದಸ್ಯರು	Nethrapallavi.M
8	ಹಾ ನಾ ಭುವನೇಶ್ವರಿ (ಭುವನ)	ಸದಸ್ಯರು	Bhuvana
9	ಸುಜಾತ. ಡಿ.ಸಿ.ರಮೇಶ್	ಸದಸ್ಯರು	Sujatha
10	ಮಂಜುಳ	ಸದಸ್ಯರು	ಮಂಜುಳ
11	ಎಸ್.ಜಿ. ನಾಗರಾಜ್	ಸದಸ್ಯರು	

Scanned with CamScanner